ಓಂ ಶಾಂತಿ, ಬಾಪ್‌ದಾದಾ, ರಿವೈಸ್ ಕೋರ್ಸ್/ ಅವ್ಯಕ್ತ ಮುರಳಿ 18-01-2002.

# *ಸ್ನೇಹದ ಶಕ್ತಿಯ ಮೂಲಕ ಸಮರ್ಥರಾಗಿ, ಸರ್ವ ಆತ್ಮರಿಗೆ ಸುಖ, ಶಾಂತಿಯ ಬಿಂದುಗಳನ್ನು ಕೊಡಿ.*

(स्नेह की शक्ति द्वारा समर्थ बनो, सर्व आत्माओं को सुख-शान्ति की अंचली दो)

ಶಿವಪರಮಾತ್ಮ ಈ ಭೂಮಿಯ ಮೇಲೆ ಅವತರಿಸಿ ಜ್ಞಾನ, ಯೋಗಗಳಿಂದ  ಧರ್ಮಸ್ಥಾಪನೆಯನ್ನು ಮಾಡುತ್ತಿದ್ದಾರೆ.

ಮುರಳಿಯನ್ನು ಓದಬೇಕಾದರೆ ಆತ್ಮಿಕ ಸ್ಥಿತಿಯಲ್ಲಿದ್ದು ತಂದೆಯೊಂದಿಗೆ ಶಿಕ್ಷಕನ ಸಂಬಂಧವನ್ನು ಜೋಡಿಸಿ ಈಶ್ವರೀಯ ವಿದ್ಯಾರ್ಥಿಯ ಸ್ಥಿತಿಯಲ್ಲಿದ್ದು ಮಹಾವಾಕ್ಯಗಳನ್ನು ಆತ್ಮಕ್ಕೆ ಅನ್ವಯಿಸಿಕೊಂಡು ಓದಿದಾಗ ಮುರಳಿ ಅರ್ಥವಾಗುತ್ತದೆ. ಅದಕ್ಕಾಗಿ ನಾವು ಮಾಡಬೇಕಾಗಿರುವ ಸಂಕಲ್ಪಗಳು.

• ನಾನಾತ್ಮ ನಿರಾಕಾರ ಜ್ಯೋತಿರ್ಬಿಂದು ಸ್ವರೂಪ ಶಿವಪರಮಾತ್ಮನನ್ನ ತಂದೆ.

• ನಾನು ಈಶ್ವರೀಯ ವಿದ್ಯಾರ್ಥಿ, ಶಿವ ಪರಮಾತ್ಮ ನನಗೆ ಟೀಚರ್ ಅಥವಾ ಶಿಕ್ಷಕ.

• ಶಿವಪರಮಾತ್ಮ ನನಗೆ ಸದ್ಗುರು, ನಾನು ಮಾಸ್ಟರ್ ಸದ್ಗುರು.

• ಶಿವಪರಮಾತ್ಮ ನನಗೆ ಜೀವನ ಸಂಗಾತಿ, ನಾನು ಶಿವ ಪರಮಾತ್ಮನಿಗೆ ಜೀವನ ಸಂಗಾತಿ.

ಇಂದು ಸಮರ್ಥ ತಂದೆ ತನ್ನ ಸ್ಮೃತಿ ಸ್ವರೂಪ, ಸಮರ್ಥ ಸ್ವರೂಪ ಮಕ್ಕಳೊಂದಿಗೆ ಮಿಲನ ಮಾಡಲು ಬಂದಿದ್ದಾರೆ. ಇಂದು ವಿಶೇಷವಾಗಿ ನಾಲ್ಕೂ ಕಡೆಯ ಮಕ್ಕಳು ಸ್ನೇಹದ ಅಲೆಯಲ್ಲಿ ತೇಲಾಡುತ್ತಿದ್ದಾರೆ. ವಿಶೇಷವಾಗಿ ಬ್ರಹ್ಮಾ ತಂದೆಯ ಸ್ನೇಹದ ಸ್ಮೃತಿಯಲ್ಲಿ ಮುಳುಗಿದ್ದಾರೆ. ಈ ಸ್ನೇಹ ಪ್ರತಿ ಒಬ್ಬ ಮಗುವಿಗೆ ಈ ಜೀವನದಲ್ಲಿ ವರದಾನವಾಗಿದೆ. ಪರಮಾತ್ಮನ ಸೇಹವು ತಮ್ಮೆಲ್ಲರಿಗೂ ಹೊಸ ಜೀವನವನ್ನು ನೀಡಿದೆ. ಪ್ರತಿಯೊಬ್ಬ ಮಗುವಿಗೂ ಸೇಹದ ಶಕ್ತಿಯೇ ಬಾಬಾರವರ ಮಕ್ಕಳನ್ನಾಗಿ ಮಾಡಿದೆ. ಈ ಸ್ನೇಹದ ಶಕ್ತಿ ಎಲ್ಲವನ್ನು ಸಹಜವನ್ನಾಗಿ ಮಾಡುತ್ತದೆ. ಸೇಹದಲ್ಲಿ ಮುಳುಗಿಹೋದರೆ ಪರಿಸ್ಥಿತಿಯನ್ನು ಸಹಜವಾಗಿ ಅನುಭವ ಮಾಡುತ್ತೀರಿ. ಬಾಪ್‌ದಾದಾರವರೂ ಸಹ ಸದಾ ಸೇಹದ ಸಾಗರದಲ್ಲಿ ಮುಳುಗಿಹೋಗಿರೆಂದು ಹೇಳುತ್ತಾರೆ. ತಂದೆಯ ಸ್ನೇಹವು ಛತ್ರಛಾಯೆಯಾಗಿದೆ. ಈ ಛತ್ರಛಾಯೆಯ ಒಳಗಡೆ ಯಾವುದೇ ಮಾಯೆಯ ನೆರಳು ಬೀಳಲು ಸಾಧ್ಯವಿಲ್ಲ. ಸಹಜವಾಗಿ ಮಾಯಾಜೀತರಾಗಿಬಿಡುತ್ತೀರಿ. ಯಾರು ನಿರಂತರ ಸ್ನೇಹದಲ್ಲಿ ಇರುತ್ತಾರೆಯೋ ಅವರಿಗೆ ಯಾವುದೇ ವಿಷಯದಲ್ಲಿ ಪರಿಶ್ರಮ ಪಡುವ ಅಗತ್ಯವಿರುವುದಿಲ್ಲ. ಸ್ನೇಹ

ಸಹಜವಾಗಿ ತಂದೆಯ ಸಮಾನರನ್ನಾಗಿ ಮಾಡಿಬಿಡುತ್ತದೆ. ಸ್ನೇಹದಿಂದ ಏನನ್ನಾದರೂ ಸಮರ್ಪಣೆ ಮಾಡುವುದು ಸಹಜವಾಗಿ ಬಿಡುತ್ತದೆ.

ಈ ದಿನ ಅಮೃತವೇಳೆಯಿಂದ ಪ್ರತಿಯೊಬ್ಬ ಮಗುವು ಸ್ನೇಹದ ಮಾಲೆಯನ್ನು ತಂದೆಗೆ ಹಾಕಿದರು. ಮತ್ತು ತಂದೆಯು ಸಹ ಮಕ್ಕಳಿಗೆ ಸ್ನೇಹದ ಮಾಲೆಯನ್ನು ಹಾಕಿದರು. ಹೇಗೆ ಈ ವಿಶೇಷ ಸ್ಮೃತಿ ದಿವಸದಲ್ಲಿ ಅರ್ಥಾತ್ ಸ್ನೇಹದ ದಿನದಂದು ಸ್ನೇಹದಲ್ಲಿ ಮುಳುಗಿದ್ದೀರೋ ಹಾಗೆಯೇ ಸದಾ ಮುಳುಗಿರಬೇಕು. ಆಗ ಪರಿಶ್ರಮದ ಪುರುಷಾರ್ಥ ಮಾಡುವ ಅವಶ್ಯಕತೆ ಇರುವುದಿಲ್ಲ. ಒಂದಾಗಿದೆ ಸ್ನೇಹದ ಸಾಗರದಲ್ಲಿ ಮುಳುಗುವುದು. ಮತ್ತು ಎರಡನೆಯದಾಗಿ ಸ್ನೇಹದ ಸಾಗರದಲ್ಲಿ ಸ್ವಲ್ಪ ಸಮಯ ಮುಳುಗುವುದು. ಕೆಲವು ಮಕ್ಕಳು ಮುಳುಗಿರುವುದಿಲ್ಲ. ಬಹಳ ಬೇಗ ಹೊರ ಬಂದುಬಿಡುತ್ತಾರೆ. ಆದ್ದರಿಂದ ಸಹಜವು ಕಷ್ಟವಾಗಿಬಿಡುತ್ತದೆ. ಅಂದಾಗ ಮುಳುಗಲು ಬರುತ್ತದೆಯೆ? ಮುಳುಗುವುದರಲ್ಲೇ ಆನಂದವಿರುತ್ತದೆ. ಬ್ರಹ್ಮಾ ತಂದೆ ಸದಾ ತಂದೆಯ ಸ್ನೇಹದಲ್ಲಿ ಮುಳುಗಿರುತ್ತಿದ್ದರು. ಇದರ ನೆನಪಾರ್ಥವಾಗಿ ಕಲ್ಕತ್ತಾದಲ್ಲಿ ತೋರಿಸಲಾಗಿದೆ (ಬ್ರಹ್ಮಪುತ್ರ ನದಿ ಸಾಗರವನ್ನು ಸೇರುವುದು).

ಈಗ ಬಾಪ್‌ದಾದಾ ಎಲ್ಲಾ ಮಕ್ಕಳಿಂದ ಇದನ್ನೇ ಬಯಸುತ್ತಾರೆ. ಏನೆಂದರೆ ತಂದೆಯ ಪ್ರೀತಿಯ ಪ್ರಮಾಣ ಸಮಾನರಾಗಿ ತೋರಿಸಿ. ಸದಾ ಸಂಕಲ್ಪದಲ್ಲಿ ಸಮರ್ಥರಾಗಿರಿ. ಈಗ ವ್ಯರ್ಥದ ಸಮಾಪ್ತಿ ಸಮಾರೋಹವನ್ನು ಆಚರಿಸಿರಿ. ಏಕೆಂದರೆ ವ್ಯರ್ಥವು ಸಮರ್ಥರಾಗಲು ಬಿಡುವುದಿಲ್ಲ ಮತ್ತು ಎಲ್ಲಿಯವರೆಗೆ ನಿಮಿತ್ತ ಮಕ್ಕಳಾದ ನೀವು ಸದಾ ಸಮರ್ಥರಾಗದೇ ವಿಶ್ವಾತ್ಮರನ್ನು ಸಮರ್ಥರನ್ನಾಗಿ ಹೇಗೆ ಮಾಡುವಿರಿ! ಎಲ್ಲಾ ಆತ್ಮರು ಶಕ್ತಿಯಿಂದ ಸಂಪೂರ್ಣ ಖಾಲಿಯಾಗಿದ್ದಾರೆ. ಶಕ್ತಿಗಳ ಭಿಕಾರಿಗಳಾಗಿಬಿಟ್ಟಿದ್ದಾರೆ. ಇಂತಹ ಭಿಕಾರಿ ಆತ್ಮರನ್ನು ಭಿಕಾರಿ ಸ್ಥಿತಿಯಿಂದ ಸಮರ್ಥ ಆತ್ಮರಾದ ನೀವು ಮುಕ್ತರನ್ನಾಗಿ ಮಾಡಿರಿ. ಆತ್ಮರು ಸಮರ್ಥ ಆತ್ಮರಾದ ನಿಮ್ಮನ್ನು ಕರೆಯುತ್ತಿದ್ದಾರೆ. **ಮುಕ್ತಿದಾತನ ಮಕ್ಕಳಾದ ಓ ಮಾಸ್ಟರ್ ಮುಕ್ತಿದಾತರೇ! ನಮಗೆ ಮುಕ್ತಿಯನ್ನು ಕೊಡಿ ಎಂದು ಕೇಳುತ್ತಿದ್ದಾರೆ. ಈ ಕೂಗು ನಿಮ್ಮ ಕಿವಿಗೆ ಪ್ರತಿಧ್ವನಿಸುವುದಿಲ್ಲವೇ? ಕೇಳುತ್ತಿಲ್ಲವೇ? ಇದುವರೆಗೂ ತಮ್ಮನ್ನು ತಾವೇ ಮುಕ್ತ ಮಾಡಿಕೊಳ್ಳುವುದರಲ್ಲಿ ಬಿಜಿ ಆಗಿದ್ದೀರಾ? ವಿಶ್ವದ ಆತ್ಮರಿಗೆ ಬೇಹದ್ದಿನ ಸ್ವರೂಪದಿಂದ ಮಾಸ್ಟರ್ ಮುಕ್ತಿದಾತರಾಗುವುದರಿಂದ ಚಿಕ್ಕ ಚಿಕ್ಕ ಸಮಸ್ಯೆಗಳಿಂದ ಸ್ವತಹವಾಗಿ ಮುಕ್ತರಾಗಿಬಿಡುತ್ತಾರೆ. ಈಗ ಆತ್ಮರ ಕೂಗನ್ನು ಕೇಳಿಸಿಕೊಳ್ಳುವ ಸಮಯವಾಗಿದೆ. ಆತ್ಮರ ಕೂಗನ್ನು ಕೇಳಲು ಬರುತ್ತದೆಯೋ ಅಥವಾ ಇಲ್ಲವೋ? ತಬ್ಬಿಬ್ಬಾದ ವಿಶ್ವಾತ್ಮರಿಗೆ ಸುಖ, ಶಾಂತಿಯ ಹನಿಯನ್ನು ನೀಡಿ. ಇದೇ ಬ್ರಹ್ಮಾ ತಂದೆಯನ್ನು ಅನುಸರಿಸುವುದಾಗಿದೆ.**

ಈ ದಿನ ವಿಶೇಷವಾಗಿ ಬ್ರಹ್ಮಾ ತಂದೆಯ ನೆನಪನ್ನು ಹೆಚ್ಚು ಮಾಡಿದಿರಲ್ಲವೇ! ಬ್ರಹ್ಮಾ ತಂದೆಯೂ ಸಹ ಎಲ್ಲಾ ಮಕ್ಕಳನ್ನು ಸ್ಮೃತಿ ಮತ್ತು ಸಮರ್ಥ ಸ್ವರೂಪದಿಂದ ನೆನಪು ಮಾಡಿದರು. ಕೆಲವು ಮಕ್ಕಳು ಬ್ರಹ್ಮಾ ತಂದೆಯೊಂದಿಗೆ ಆತ್ಮಿಕ ವಾರ್ತಾಲಾಪ ಮಾಡುತ್ತಾ ಮಧುರಾತಿ ಮಧುರವಾದ ದೂರುಗಳನ್ನು ನೀಡಿದರು. ಏನೆಂದರೆ ನೀವು ಇಷ್ಟು ಬೇಗ ಏಕೆ ಹೋಗಿಬಿಟ್ಟಿರಿ? ಮತ್ತು ಎರಡನೆಯ ದೂರು ಏನೆಂದರೆ ನಾವು ಎಲ್ಲಾ ಮಕ್ಕಳ ಒಪ್ಪಿಗೆಯನ್ನು ಏಕೆ ಪಡೆಯದೇ ಹೋದಿರಿ? ಬ್ರಹ್ಮಾ ತಂದೆ ತಿಳಿಸಿದರು. ನಾನು ಸಹ ಶಿವ ತಂದೆಯನ್ನು ಕೇಳಿದೆ. ನನ್ನನ್ನು ಇದ್ದಕ್ಕಿದ್ದ ಹಾಗೆ ಏಕೆ ಕರೆದಿರಿ

ಎಂದು. ಆಗ ಶಿವ ತಂದೆ ಹೇಳಿದರು-ಒಂದುವೇಳೆ ನಾನು ನಿಮಗೆ ಒಪ್ಪಿಗೆಯನ್ನು ತೆಗೆದುಕೊಂಡು ಬನ್ನಿ ಎಂದು ಹೇಳಿದ್ದರೆ ನೀವು ಮಕ್ಕಳನ್ನು ಬಿಟ್ಟು ಬರುತ್ತಿದ್ದೀರಾ ಅಥವಾ ಮಕ್ಕಳು ನಿಮ್ಮನ್ನು ಬಿಟ್ಟುಬಿಡುತ್ತಿದ್ದರೇ? ನೀವು ಅರ್ಜುನರ ನೆನಪಾರ್ಥವಾಗಿ ಅಂತ್ಯದಲ್ಲಿ ನಷ್ಟೋ ಮೋಹಸ್ಮೃತಿ ಸ್ವರೂಪರಾಗುವುದಾಗಿದೆ. ಬ್ರಹ್ಮಾ ತಂದೆ ಮುಗುಳ್ನಕ್ಕರು. ಮತ್ತೆ ಹೇಳಿದರು ಇದಂತೂ ಅದ್ಭುತವಾಗಿತ್ತು. ಮಕ್ಕಳಿಗೂ ಸಹ ತಿಳಿಯಲಿಲ್ಲ ಮತ್ತು ಬ್ರಹ್ಮಾರವರಿಗೂ ಸಹ ನಾನು ಹೋಗುತ್ತಿದ್ದೇನೆಂದು ತಿಳಿಯಲಿಲ್ಲ. ಮುಂದೆಯಿದ್ದರೂ ಸಹ ಎರಡೂ ಕಡೆ ನಿಶ್ಯಬ್ದವೇ ಇತ್ತು. ಏಕೆಂದರೆ ಸಮಯ ಪ್ರಮಾಣ ತಂದೆಯನ್ನು ಪ್ರತ್ಯಕ್ಷ  ಮಾಡುವ ಪಾತ್ರ ಡ್ರಾಮಾದಲ್ಲಿ ನೊಂದಣಿಯಾಗಿತ್ತು. ಇದಕ್ಕೆ ಹೇಳಲಾಗುತ್ತದೆ ಭಲೆ ಡ್ರಾಮಾ ಭಲೆ!ಸೇವೆಯ ಪರಿವರ್ತನೆ ನೊಂದಾಯಿಸಲ್ಪಟ್ಟಿತ್ತು. ಬ್ರಹ್ಮಾ ತಂದೆ ಮಕ್ಕಳ ಬೆನ್ನೆಲುಬಾಗಬೇಕಿತ್ತು. (ಬ್ಯಾಕ್ ಬೋನ್) ಅವ್ಯಕ್ತರೂಪದಲ್ಲಿ ತೀವ್ರ ಸೇವೆಯ ಪಾತ್ರವನ್ನು ಅಭಿನಯಿಸಬೇಕಿತ್ತು.

ವಿಶೇಷವಾಗಿ ಈ ದಿನ ಡಬಲ್ ವಿದೇಶದ ಮಕ್ಕಳು ಬಹಳ ಮಧುರಾತಿ ಮಧುರ ದೂರನ್ನು ಕೊಟ್ಟಿದ್ದಾರೆ. ಡಬಲ್ ವಿದೇಶದವರು ದೂರನ್ನು ಕೊಟ್ಟಿದ್ದೀರಾ? ಡಬಲ್ ವಿದೇಶದವರು ಬ್ರಹ್ಮಾ ತಂದೆಗೆ ಹೇಳಿದರು....ಕೇವಲ ಎರಡು ಮೂರು ವರ್ಷಗಳು ನೀವು ಇದ್ದಿದ್ದರೆ ನಾವೂ ಸಹ ನೋಡುತ್ತಿದ್ದೆವು. ಬ್ರಹ್ಮಾ ತಂದೆ ನಗುತ್ತಾ ಹೇಳಿದರು-ಡ್ರಾಮಾದ ಜೊತೆ ಮಾತನಾಡಿ, ಡ್ರಾಮಾ ಹೀಗೆ ಏಕೆ ಮಾಡಿತು! ಆದರೆ ಕೊನೆಯಲ್ಲಿ ಬಂದಿದ್ದರೂ ತೀವ್ರವಾಗಿ ಮುಂದೆ ಹೋಗುವ ಉದಾಹರಣೆ ಆಗಬೇಕಿತ್ತು. ಭಾರತದಲ್ಲಿ ಆಗಿರಲಿ ಅಥವಾ ವಿದೇಶದಲ್ಲಾಗಿರಲಿ. ಈಗ ಕೊನೆಯಲ್ಲಿ ಬಂದಿದ್ದರೂ ಮುಂದೆ ಹೋಗುವ ಪ್ರತ್ಯಕ್ಷ ಪ್ರಮಾಣ ತೋರಿಸಿ ಹೇಗೆ ಈ ದಿನ ಸಮರ್ಥ ದಿವಸವಾಗಿ ಆಚರಿಸಿದಿರೋ ಹಾಗೆಯೇ ಪ್ರತಿ ದಿನ ಸಮರ್ಥ ದಿನವಾಗಿರಲಿ' ಯಾವುದೇ ಪ್ರಕಾರದ ಏರು ಪೇರು ಇರಬಾರದು. ಬ್ರಹ್ಮಾ ತಂದೆ ಈ ದಿನ ಮೂರು ಶಬ್ದದ ಶಿಕ್ಷಣವನ್ನು ಕೊಟ್ಟಿದ್ದರು. (ನಿರಾಕಾರಿ, ನಿರ್ವಿಕಾರಿ ಮತ್ತು ನಿರಹಂಕಾರಿ) ಈ ಮೂರು ಶಬ್ದದ ಶಿಕ್ಷಣ ಸ್ವರೂಪರಾಗಿ, ಮನಸ್ಸಿನಲ್ಲಿ ನಿರಾಕಾರಿ ಮಾತಿನಲ್ಲಿ ನಿರಹಂಕಾರಿ, ಕರ್ಮದಲ್ಲಿ ನಿರ್ವಿಕಾರಿ ಸೆಕೆಂಡಿನಲ್ಲಿ ಸಾಕಾರ ಸ್ವರೂಪದಲ್ಲಿ ಬನ್ನಿ. ಸೆಕೆಂಡಿನಲ್ಲಿ ನಿರಾಕಾರ ಸ್ವರೂಪದಲ್ಲಿ ಸ್ಥಿತರಾಗಿ. ಈ ಅಭ್ಯಾಸ ಇಡೀ ದಿನದಲ್ಲಿ ಮತ್ತೆ ಮತ್ತೆ ಮಾಡಿ. **ಕೇವಲ ನೆನಪಿನಲ್ಲಿ ಕುಳಿತ ಸಮಯದಲ್ಲಿ ನಿರಾಕಾರ ಸ್ಥಿತಿಯಲ್ಲಿ ಕುಳಿತುಕೊಳ್ಳುವುದಲ್ಲ ಆದರೆ, ಮಧ್ಯ ಮಧ್ಯದಲ್ಲಿ ಸಮಯ ತೆಗೆದು ಈ ದೇಹದ ಪರಿವೆಯಿಂದ ದೂರ ನಿರಾಕಾರಿ ಆತ್ಮನ ಸ್ವರೂಪದಲ್ಲಿ ಸ್ಥಿತರಾಗುವ ಅಭ್ಯಾಸ ಮಾಡಿ. ಯಾವುದೇ ಕೆಲಸ ಮಾಡುತ್ತಿದ್ದರೂ ಸಹ ನಾನು ನಿರಾಕಾರ ಆತ್ಮ ಈ ಸಾಕಾರ ಕರ್ಮೇಂದ್ರಿಯಗಳ ಆಧಾರದಿಂದ ಕರ್ಮ ಮಾಡುತ್ತಿದ್ದೇನೆ. ನಿರಾಕಾರ ಸ್ಥಿತಿ ಕಾರ್ಯವನ್ನು ಮಾಡಿಸುವಂತಹ ಸ್ಥಿತಿಯಾಗಿದೆ. ಕರ್ಮೇಂದ್ರಿಯಗಳು ಕರ್ಮಚಾರಿಗಳಾಗಿವೆ (ಮಾಡುವಂತಹವು). ಆತ್ಮ ಮಾಡಿಸುವಂತಹದಾಗಿದೆ. ನಿರಾಕಾರಿ ಆತ್ಮನ ಸ್ಥಿತಿಯಿಂದ ತಂದೆಯ ನೆನಪು ಸ್ವತಃವಾಗಿಯೇ ಬರುತ್ತದೆ. ಹೇಗೆ ತಂದೆ ಕರ್ತವ್ಯವನ್ನು ಮಾಡಿಸುತ್ತಾರೆಯೋ 'ಹಾಗೆಯೇ ನಾನು ಆತ್ಮನೂ ಸಹ ಕರ್ತವ್ಯವನ್ನು ಮಾಡಿಸುವವನಾಗಿದ್ದೇನೆ. ಆದ್ದರಿಂದ ಕರ್ಮದ ಬಂಧನದಲ್ಲಿ ಸಿಕ್ಕಿಕೊಳ್ಳುವುದಿಲ್ಲ. ಅತೀತವಾಗಿರುತ್ತೀರಿ. ಏಕೆಂದರೆ ಕರ್ಮದ ಬಂಧನದಲ್ಲಿ ಮುಳುಗುವುದರಿಂದಲೇ ಸಮಸ್ಯೆಗಳು ಬರುತ್ತವೆ. ಇಡಿ ದಿನದಲ್ಲಿ ಪರಿಶೀಲನೆ ಮಾಡಿಕೊಳ್ಳಿ-ಮಾಡಿಸುವಂತಹ ಅತ್ಮನಾಗಿ ಕರ್ಮ ಮಾಡಿಸುತ್ತಿದ್ದೇನೆಯೇ? ಒಳ್ಳೆಯದು-ಈಗ ಮುಕ್ತಿ ಕೊಡಿಸುವ ಮೆಷಿನರಿ(ಯಂತ್ರ)ವನ್ನು ತೀವ್ರ ಮಾಡಿರಿ. ಒಳ್ಳೆಯದು.**

ಈ ಬಾರಿ ಈ ಕಲ್ಪದಲ್ಲಿ ಬಂದಿರುವವರು ಕೈಯನ್ನು ಎತ್ತಿರಿ. ಹೊಸ ಹೊಸ ಮಕ್ಕಳಿಗೆ ಬಾಪ್‌ದಾದಾ ವಿಶೇಷ ನೆನಪು, ಪ್ರೀತಿಯನ್ನು ಕೊಡುತ್ತಿದ್ದಾರೆ. ಸಮಯಕ್ಕೆ ತಂದೆಯನ್ನು ತಿಳಿದು ತಂದೆಯಿಂದ ಆಸ್ತಿಗೆ ಅಧಿಕಾರಿ ಆಗಿದ್ದೀರಿ. ಸದಾ ನಿಮ್ಮ ಈ ಭಾಗ್ಯವನ್ನು ನೆನಪಿಟ್ಟುಕೊಳ್ಳಿ. ನಾನು ತಂದೆಯನ್ನು ಅರ್ಥಮಾಡಿಕೊಂಡೆ. ಒಳ್ಳೆಯದು. ಡಬಲ್ ವಿದೇಶದವರು ಕೈಯನ್ನು ಎತ್ತಿರಿ ಬಹಳ ಒಳ್ಳೆಯದು. ಡಬಲ್ ವಿದೇಶದವರು ಬ್ರಹ್ಮಾರವರ ಸಂಕಲ್ಪದ ರಚನೆ ಆಗಿದ್ದಾರೆ ಎಂದು ಬಾಪ್‌ದಾದಾ ಹೇಳುತ್ತಾರೆ. ಒಂದಾಗಿದೆ ಬಾಯಿಂದ ತಯಾರಾದ ವಂಶಾವಳಿ ಮತ್ತು ಎರಡನೆಯದು ಸಂಕಲ್ಪದ ಮೂಲಕ ತಯಾರಾದ ವಂಶಾವಳಿ. ಸಂಕಲ್ಪ ಶಕ್ತಿ ಅತಿ ದೊಡ್ಡ ಮಹಾನ್ ಶಕ್ತಿಯಾಗಿದೆ. ಆದ್ದರಿಂದ ಹೇಗೆ ನಿಮ್ಮ ರಚನೆ ಸಂಕಲ್ಪ ಶಕ್ತಿ ತೀವ್ರವಾಗಿದೆಯೋ ಹಾಗೆಯೇ ಡಬಲ್ ವಿದೇಶದವರು ತೀವ್ರ ಪುರುಷಾರ್ಥ ಮತ್ತು ತೀವ್ರ ಪ್ರಾಲಬ್ಧದ ಅನುಭವ ಮಾಡುವವರಾಗಿದ್ದೀರಿ. ಆದ್ದರಿಂದ ಇಡೀ ಬ್ರಾಹ್ಮಣ ಪರಿವಾರದಲ್ಲಿ ಡಬಲ್ ವಿದೇಶದವರು ಡಬಲ್ ಸಿಕಿಲದೆ (ಬಹಳ ಕಾಲ ಅಗಲಿ ಹೋಗಿ ಮತ್ತೆ ಸಿಕ್ಕಿರುವವರು)ಆಗಿದ್ದೀರಿ. ಭಾರತದ ಸಹೋದರ ಸಹೋದರಿಯರು ತಮ್ಮನ್ನು ನೋಡಿ ಬಹಳ ಖುಷಿ ಪಡುತ್ತಾರೆ. ಭಲೇ ಭಲೇ ಡಬಲ್ ವಿದೇಶದವರೇ ಭಲೇ! ಡಬಲ್ ವಿದೇಶದವರಿಗೆ ಖುಷಿಯಿದೆಯಲ್ಲವೇ? ಬಹಳ ಖುಷಿ ಇದೆಯೇ? ಎಷ್ಟು ಖುಷಿ? ಬಹಳ ಇದೆಯಾ? ಅಳತೆ ಮಾಡಲು ಯಾವುದೇ ಮಾಪನವಿಲ್ಲ. ವಿದೇಶದಲ್ಲಿ ಸಹ ಕೇಳುತ್ತಿದ್ದಾರೆ. ನೋಡುತ್ತಿದ್ದಾರೆ. ಈ ವಿಜ್ಞಾನದ ಸಾಧನಗಳು ತಮಗೆ ಬೇಹದ್ದಿನ ಸೇವೆ ಮಾಡುವುದರಲ್ಲಿ ಬಹಳ ಜೊತೆ ನೀಡುತ್ತವೆ, ಮತ್ತು ಸಹಜವಾಗಿ ಸೇವೆ ಮಾಡಿಸುತ್ತವೆ. ಈ ವಿಜ್ಞಾನದ ತೀವ್ರಗತಿಯದ್ದೂ ಸಹ ನಿಮ್ಮ ಸ್ಥಾಪನೆಯೊಂದಿಗೆ ಸಂಬಂಧವಿದೆ. ಒಳ್ಳೆಯದು.

ಎಲ್ಲಾ ಪಾಂಡವರು ಸಮರ್ಥರಾಗಿದ್ದೀರಲ್ಲವೆ? ನಿರ್ಬಲರಲ್ಲ. ಎಲ್ಲರೂ ಸಮರ್ಥರೇ ತಾನೇ? ಮತ್ತು ಶಕ್ತಿಯರು ತಂದೆಯ ಸಮಾನವಿದ್ದೀರಿ. ಶಕ್ತಿ ಸೇನೆಯಾಗಿದ್ದೀರಿ. ಶಕ್ತಿಯರ ಶಕ್ತಿ ಮಾಯಾಜೀತರನ್ನಾಗಿ ಮಾಡುತ್ತದೆ.

ಒಳ್ಳೆಯದು. ಇಂದು ವಿಶೇಷವಾಗಿ ಶೃಂಗಾರ ಮಾಡುವವರು ಬಂದಿದ್ದಾರೆ (ಕಲ್ಕತ್ತಾದಿಂದ ಹೂವನ್ನು ತಂದಿದ್ದಾರೆ ಎಲ್ಲಾ ಜಾಗದಲ್ಲಿ ಹೂವುಗಳಿಂದ ಬಹಳ ಸುಂದರವಾಗಿ ಶೃಂಗಾರ ಮಾಡಿದ್ದಾರೆ). ಇದೂ ಸಹ ಸ್ನೇಹದ ಗುರುತಾಗಿದೆ. ಒಳ್ಳೆಯದು ನಿಮ್ಮ ಸ್ನೇಹದ ಪ್ರತ್ಯಕ್ಷತೆಯನ್ನು ತೋರಿಸಿದ್ದೀರಿ. ಒಳ್ಳೆಯದು, ಶಿಕ್ಷಕಿಯರು ಕೈಯನ್ನು ಎತ್ತಿರಿ. ಪ್ರತಿಯೊಂದು ಗುಂಪಿನಲ್ಲಿ ಶಿಕ್ಷಕಿಯರು ಬಹಳಷ್ಟು ಬರುತ್ತೀರಿ. ಶಿಕ್ಷಕಿಯರಿಗೆ ಒಳ್ಳೆಯ ಅವಕಾಶ ಸಿಗುತ್ತದೆ. ಸೇವೆಯ ಪ್ರತ್ಯಕ್ಷ ಫಲ ಸಿಗುತ್ತದೆ. ಒಳ್ಳೆಯದು ಈಗ ತಮ್ಮ ಚೆಹರೆಯ ಮೂಲಕ ಎಲ್ಲರಿಗೂ ಭವಿಷ್ಯದ ಸಾಕ್ಷಾತ್ಕಾರವನ್ನು ಮಾಡಿಸಿ. ಕೇಳಿದಿರಾ? ಏನು ಮಾಡಬೇಕು? ಒಳ್ಳೆಯದು.

ಮಧುಬನದವರು ಕೈಯನ್ನು ಎತ್ತಿರಿ, ಬಹಳ ಒಳ್ಳೆಯದು. ಮಧುಬನದವರಿಗೆ ಬಹಳ ಅವಕಾಶ ಸಿಗುತ್ತದೆ. ಆದ್ದರಿಂದ ಬಾಪ್‌ದಾದಾ ಮಧುಬನದವರು ಆತ್ಮಿಕ ಚಾನ್ಸಲರ್ ಎಂದು ಹೇಳುತ್ತಾರೆ. ಅಲ್ಲವೆ? ಚಾನ್ಸಲರ್ ಆಗಿದ್ದೀರಾ? ಸೇವೆ ಮಾಡಬೇಕಾಗುತ್ತದೆ. ಮತ್ತೆ ಎಲ್ಲರನ್ನು ಮಧುಬನನಿವಾಸಿಗಳು ಸಂತುಷ್ಟ ಪಡಿಸುತ್ತೀರಿ. ಆದ್ದರಿಂದ ಬಾಪ್‌ದಾದಾರವರು ಸಹ ಮಧುಬನದವರನ್ನು ಎಂದೂ ಮರೆಯುವುದಿಲ್ಲ. ಮುಖ್ಯವಾಗಿ ನೆನಪು ಮಾಡುತ್ತಾರೆ. ಏಕೆ

ಮಧುಬನದವರನ್ನು ನೆನಪು ಮಾಡುತ್ತಾರೆ? ಏಕೆಂದರೆ ಮಧುಬನದವರು ತಂದೆಯ ಪ್ರೀತಿಯಲ್ಲಿ ಮೆಜಾರಿಟಿ ಪಾಸ್ ಆಗಿದ್ದಾರೆ. ಮೆಜಾರಿಟಿ ತಂದೆಯ ಜೊತೆ ಪ್ರೀತಿ ಬಹಳ ಇದೆ ಕಡಿಮೆ ಇಲ್ಲ. ಮಧುಬನದವರು ಬಹಳ ಒಳ್ಳೆಯವರಾಗಿದ್ದೀರಿ

ಇಂಡೋರ್ ಜೋನಿನ ಸೇವಾಧಾರಿಗಳು ಬಂದಿದ್ದಾರೆ-ಇಂಡೋರ್ ಜೋನಿನವರು ಕೈ ಎತ್ತಿ, ಬಹಳ ಇದ್ದೀರಿ ಒಳ್ಳೆಯದು. ಸೇವೆ ಮಾಡುವುದು ಅರ್ಥಾತ್ ಸಮೀಪ ಬರುವ | ಪ್ರತ್ಯಕ್ಷ ಫಲವನ್ನು ತಿನ್ನುವುದಾಗಿದೆ. ಸೇವೆಯ ಅವಕಾಶ ತೆಗೆದುಕೊಳ್ಳುವುದು ಅರ್ಥಾತ್ ಪುಣ್ಯವನ್ನು ಜಮಾ ಮಾಡಿಕೊಳ್ಳುವುದಾಗಿದೆ. ಆಶೀರ್ವಾದಗಳನ್ನು ಜಮಾ ಮಾಡಿಕೊಳ್ಳುವುದು ಎಂದರೆ ಎಲ್ಲಾ ಸೇವಾಧಾರಿಗಳು ತಮ್ಮ ಪುಣ್ಯದ ಖಾತೆಯನ್ನು ಜಮಾ ಮಾಡಿಕೊಳ್ಳುವುದು. ಈ ಆಶೀರ್ವಾದ ಅಥವಾ ಪುಣ್ಯವು ಎಕ್ಸ್‌ಟ್ರಾ ಲಿಫ್ಟನ ಕೆಲಸ ಮಾಡುತ್ತದೆ. ಒಳ್ಳೆಯದು ದೇಶ ವಿದೇಶದಲ್ಲಿ ದೂರ ಕುಳಿತಿದ್ದರೂ ಸಹ ಸಮೀಪ ಇದ್ದೀರಿ. ಎಲ್ಲಾ ಮಕ್ಕಳನ್ನು ಬಾಪ್‌ದಾದಾ ಸ್ನೇಹದ ದಿವಸದಲ್ಲಿ ರಿಟರ್ನ್ ಆಗಿ ಪದಮಗುಣ ಸ್ನೇಹದ ನೆನಪನ್ನು ನೀಡುತ್ತಿದ್ದಾರೆ. ಬಾಪ್‌ದಾದಾ ಎಲ್ಲೆಲ್ಲಿ ಯಾವ ಸಮಯವಾಗಿದೆ ಎಂದು ನೋಡುತ್ತಿರುತ್ತಾರೆ. ಆದರೆ ಜಾಗೃತ ಜ್ಯೋತಿಗಳು ಧಣಿವಿಲ್ಲದೆ ಕೇಳುತ್ತಿದ್ದಾರೆ ಮತ್ತು ಖುಷಿ ಪಡುತ್ತಿದ್ದಾರೆ. ಬಾಪ್‌ದಾದಾ ಮಕ್ಕಳ ಖುಷಿಯನ್ನು ನೋಡುತ್ತಿದ್ದಾರೆ. ಹೇಳಿ, ಎಲ್ಲರೂ ಖುಷಿಯಲ್ಲಿ ನೃತ್ಯ ಮಾಡುತ್ತಿದ್ದೀರಲ್ಲವೇ? ಹೌದು ಬಾಬಾ ಎಂದು ಎಲ್ಲರು ತಲೆ ಅಲುಗಾಡಿಸುತ್ತಿದ್ದಾರೆ. ಜನಕ್ ಮಗು ಕೂಡ ತುಂಬಾ ಮಧುರ ಮಧುರವಾಗಿ ಮುಗುಳ್ನಗುತ್ತಿದ್ದಾರೆ. ಎಲ್ಲರೂ ತಂದೆಗೆ ನೆನಪಿದ್ದಾರೆ. ಆದರೆ ಎಷ್ಟು ಜನರ ಹೆಸರನ್ನು ಹೇಳುವುದು? ಅನೇಕ ಮಕ್ಕಳಿದ್ದಾರೆ ಆದ್ದರಿಂದ ಬಾಪ್‌ದಾದಾ ತಿಳಿಸುತ್ತಾರೆ ಪ್ರತಿಯೊಬ್ಬ ಮಗು ತಮ್ಮ ಹೆಸರಿನಲ್ಲಿ ಪರ್ಸನಲ್ ನೆನಪು, ಪ್ರೀತಿಯನ್ನು ಸ್ವೀಕಾರ ಮಾಡುತ್ತಿದ್ದಾರೆ ಮತ್ತು ಮಾಡುತ್ತಾ ಇರಿ. ಒಳ್ಳೆಯದು. ಈಗ ಒಂದು ಸೆಕೆಂಡಿನಲ್ಲಿ ನಿರಾಕಾರಿ ಸ್ಥಿತಿಯಲ್ಲಿ ಸ್ಥಿತರಾಗಿ. ಒಳ್ಳೆಯದು (ಡ್ರಿಲ್ ಮಾಡಿಸಿದರು)

ಲವಿಂಗ್ ವ್ಯಾಲ್ಯುಸ್‌ನಲ್ಲಿ ಟ್ರೈನಿಂಗ್ ನಡೆಯುತ್ತಿದೆ-ಒಳ್ಳೆಯ ಸೇವೆಯ ಸಾಧನವಾಗಿದೆ ಲವಿಂಗ್ ವ್ಯಾಲ್ಯುಸ್ ಮಾಡುತ್ತಾ ಮಾಡುತ್ತಾ ತಮ್ಮ ಲವ್ಲೀ ಲಿವಿಂಗ್ (ಪ್ರೀತಿ ತುಂಬಿದ ಜೀವನ) ವನ್ನು ಹೆಚ್ಚು ಮಾಡಿಕೊಳ್ಳಿ.

ಒಳ್ಳೆಯದು ಬಾಪ್‌ದಾದಾ ಇಂದು ಒಂದು ಮಾತನ್ನು ಗುಲ್ಜಾರ್ ಮಗುವಿಗೆ ಹೇಳುತ್ತಿದ್ದಾರೆ ಹಾಗೂ ವಿಶೇಷ ಅಭಿನಂದನೆಗಳನ್ನು ತಿಳಿಸುತ್ತಿದ್ದಾರೆ-ಏನೆಂದರೆ ಬ್ರಹ್ಮಾ ತನುವಿನಲ್ಲಿ ಮಾಡಿದ ಸೇವೆಯಂತೆ ಈ ರಥವೂ ಸಹ 33 ವರ್ಷಗಳನ್ನು ಪೂರ್ತಿ ಮಾಡಿತು. ಇದೂ ಸಹ ಡ್ರಾಮಾದಲ್ಲಿ ಪಾತ್ರ ಇದೆ. ತಂದೆಯ ಸಹಾಯ ಮತ್ತು ಮಗುವಿನ ಸಾಹಸ ಎರಡು ಸೇರಿ ಪಾತ್ರವನ್ನು ಅಭಿನಯಿಸುತ್ತಿದ್ದಾರೆ. ಒಳ್ಳೆಯದು.

**ಸದಾ ಸ್ನೇಹದ ಸಾಗರದಲ್ಲಿ ಸಮಾವೇಶವಾಗಿರುವಂತಹ ಮಕ್ಕಳಿಗೆ, ಸದಾ ಪ್ರೀತಿಯಲ್ಲಿ ಮುಳುಗಿರುವಂತಹವರಿಗೆ, ಸದಾ ಮಾಡಿಸುವ ಆತ್ಮ ಎಂಬ ಸ್ವರೂಪದಲ್ಲಿ ಸ್ಥಿತರಾಗುವವರಿಗೆ, ಸದಾ ಮೂರು ಮಾತುಗಳ ಶಿವ ಮಂತ್ರವನ್ನು ಪ್ರತ್ಯಕ್ಷ ಜೀವನದಲ್ಲಿ ತರುವವರಿಗೆ, ಸದಾ ತಂದೆಯ ಸಮಾನ ಮಾಸ್ಟರ್ ಮುಕ್ತಿದಾತರಾಗಿ ವಿಶ್ವದಲ್ಲಿರುವ ಆತ್ಮರಿಗೆ ಮುಕ್ತಿಯನ್ನು ಕೊಡುವವರಿಗೆ, ಈ ವಿಧವಾದ ಸರ್ವ ಶ್ರೇಷ್ಠಾತ್ಮರಿಗೆ ಬಾಪ್‌ದಾದಾರವರ ಪ್ರಿಯ ಸ್ಮೃತಿಗಳು ಮತ್ತು ನಮಸ್ತೆ.**

ದಾದೀಜಿಯವರ ಜೊತೆ:- ಇಂದಿನ ದಿನ ಮಕ್ಕಳನ್ನು ತಂದೆಯು ವಿಶೇಷವಾಗಿ ವಿಶ್ವದ ಮುಂದೆ ಪ್ರತ್ಯಕ್ಷ ಮಾಡಿದ್ದಾರೆ. ತಂದೆ ಮಾಡಿಸುವಂತಹವರಾದರು ಮತ್ತು ಮಕ್ಕಳನ್ನು ಮಾಡುವವರನ್ನಾಗಿ ಮಾಡಿದರು. ಚೆನ್ನಾಗಿದೆ ಈ ಸ್ನೇಹದ ಅಲೆ ಎಲ್ಲರನ್ನು ಸಮಾವೇಶ ಮಾಡಿಕೊಳ್ಳುತ್ತದೆ. ಒಳ್ಳೆಯದು ಶರೀರವನ್ನು ನಡೆಸುವಂತಹ ವಿಧಿ ಗೊತ್ತಾಯಿತ್ತಲ್ಲವೆ! ನಡೆಸುತ್ತಾ, ನಡೆಸುತ್ತಾ ತಂದೆಯ ಸಮಾನ ಅವ್ಯಕ್ತರಾಗಿಬಿಡುತ್ತೀರಿ, ಆಶೀರ್ವಾದಗಳು ಸಹಜ ಪುರುಷಾರ್ಥವಾಗಿದೆ. ಇಡೀ ದಿನದಲ್ಲಿ ಯಾರೂ ಬೇಜಾರು ಮಾಡಿಕೊಳ್ಳಬಾರದು. ಅಶೀರ್ವಾದಗಳನ್ನು ತೆಗೆದುಕೊಳ್ಳುವುದು ಇದು ಫಸ್ಟ್ ಕ್ಲಾಸ್ ಪುರುಷಾರ್ಥವಾಗಿದೆ ಸಹಜ ಮತ್ತು ಫಸ್ಟ್ ಕೂಡಾ ಆಗಿದೆ. ಚೆನ್ನಾಗಿದೆಯಲ್ಲವೇ? ಶರೀರ ಹೇಗಿದ್ದರೂ ಸರಿ ಆದರೆ ಅಷ್ಟು ಶಕ್ತಿಶಾಲಿಯಾಗಿದೆ ಅಲ್ಲವೇ? ನೀವು ಎಲ್ಲಾ ಮಕ್ಕಳು 14 ವರ್ಷ ತಪಸ್ಸನ್ನು ಮಾಡಿದ್ದೀರಿ. ಆ ತಪಸ್ಸಿನ ಬಲ ಸೇವೆಯನ್ನು ಮಾಡಿಸುತ್ತಿದೆ. ಈಗಂತೂ ನಿಮಗೆ ತುಂಬಾ ಜೊತೆಗಾರರಾಗಿಬಿಟ್ಟಿದ್ದಾರೆ. ಸೇವೆಗೆ ಒಳ್ಳೊಳ್ಳೆಯ ಜೊತಗಾರರಿದ್ದಾರೆ. ನಿಮ್ಮನ್ನು ನೋಡಿ ಖುಷಿ ಆಗುತ್ತಾರೆ. ಒಳ್ಳೆಯದು.

ವರಿಷ್ಟ ಅಣ್ಣಂದಿರ ಜೊತೆ:- ಡ್ರಾಮಾನುಸಾರ ಸೇವೆಗಾಗಿ ಏನು ಪ್ಲಾನ್ ಗಳು (ಯೋಜನೆಗಳು) ಆಗುತ್ತಿವೆ. ಅವು ಚೆನ್ನಾಗಿ ಆಗುತ್ತಿವೆ ಮತ್ತು ಪ್ರತಿಯೊಬ್ಬರು ಸದಾ ಸಂಘಟನೆಯಲ್ಲಿ ಸ್ನೇಹ ಮತ್ತು ಆಶೀರ್ವಾದಗಳನ್ನು ತೆಗೆದುಕೊಳ್ಳುವುದಕ್ಕಾಗಿ ಬಾಲಕರೇ ಮಾಲೀಕರು ಎಂಬ ಪಾಠವನ್ನು ಪಕ್ಕಾ ಮಾಡಿಕೊಂಡು ಒಬ್ಬರು ಇನ್ನೊಬ್ಬರನ್ನು ಮುಂದುವರೆಸುತ್ತಾ, ಒಬ್ಬರು ಇನ್ನೊಬ್ಬರ ವಿಚಾರಗಳಿಗೆ ಗೌರವ ಕೊಡುತ್ತಾ ಮುಂದುವರೆದರೆ ಸಫಲತಯೇ ಸಫಲತೆ ಇದೆ. ಸಫಲತೆಯಂತೂ ಆಗಲೇ ಬೇಕಾಗಿದೆ. ಆದರೆ ಈಗ ಯಾರು ನಿಮಿತ್ತ ಅತ್ಮಾರಿದ್ದಾರೆಯೋ ಅವರನ್ನು ವಿಶೇಷ ಸ್ನೇಹದ ಸಂಬಂಧದಲ್ಲಿ ತರುವುದು. ಇದು ಎಲ್ಲರ ಪುರುಷಾರ್ಥವನ್ನು ತೀವ್ರ ಮಾಡುವುದಾಗಿದೆ. ಸ್ನೇಹ, ನಿಸ್ವಾರ್ಥ ಸ್ನೇಹ, ಎಲ್ಲಿ ನಿಸ್ವಾರ್ಥ ಸ್ನೇಹವಿದೆಯೋ ಅಲ್ಲಿ ಗೌರವವನ್ನು ಸಹ ಕೊಡುತ್ತಾರೆ ಮತ್ತು ತೆಗೆದುಕೊಳ್ಳುತ್ತಾರೆ. ವರ್ತಮಾನ ಸಮಯದಲ್ಲಿ ಮಾಲೆಯನ್ನು ತಿರುಗಿಸುವುದು ಇದು ವಿಶೇಷ ಆತ್ಮರ ಕಾರ್ಯವಾಗಿದೆ ಮತ್ತು ಇದರಿಂದಲೇ, ಸ್ನೇಹ ಸಂಸ್ಕಾರಗಳನ್ನು ಪರಿವರ್ತನೆ ಮಾಡಿಸಬಹುದು. ಜ್ಞಾನವು ಪ್ರತಿಯೊಬ್ಬರ ಹತ್ತಿರವೂ ಇದೆ ಆದರೆ ಸ್ನೇಹದಿಂದ ಯಾವುದೇ ರೀತಿಯ ಸಂಸ್ಕಾರವುಳ್ಳವರನ್ನೂ ಸಮೀಪ ತರಿಸಬಹುದು. ಸ್ನೇಹ ಕೇವಲ ಸ್ನೇಹದ ಎರಡು ಶಬ್ದ ಸದಾ ಕಾಲಕ್ಕಾಗಿ ಅವರ ಜೀವನದ ಆಶ್ರಯವಾಗಬಹುದು, ನಿಸ್ವಾರ್ಥ ಸ್ನೇಹ ಬಹಳಷ್ಟು ಬೇಗ ಮಾಲೆಯನ್ನು ತಯಾರು ಮಾಡುತ್ತದೆ. ಬ್ರಹ್ಮಾ ತಂದೆಯವರು ಏನು ಮಾಡಿದರು? ಸ್ನೇಹದಿಂದ ತನ್ನವರನ್ನಾಗಿ ಮಾಡಿಕೊಂಡರು. ಈಗ ಇದರ ಅವಶ್ಯಕತೆ ಇದೆ. ಈ ರೀತಿ ಇದೆಯಲ್ಲವೆ!

(ಸೋನಿಪತ್ ಬಗ್ಗೆ ಮೀಟಿಂಗ್ ನಡೆಯುತ್ತಿದೆ. ಅಲ್ಲಿ ಅನುಭೂತಿ ಮಾಡಿಸುವುದಕ್ಕಾಗಿ ಸಾಧನೆಗಳ ಉಪಯೋಗ ಹೇಗೆ ಮಾಡುವುದು)

ಅವರಂತೂ ಪ್ಲಾನನ್ನು ಮಾಡುತ್ತಿದ್ದಾರೆ. ಪ್ರತಿಯೊಬ್ಬರ ಸಂಕಲ್ಪ ವಿಚಾರಗಳನ್ನು ಯಾರು ವಿಶೇಷ ಹೆಚ್ಚು ಸ್ವೀಕಾರ ಮಾಡುತ್ತಾರೆಯೋ ಅದನ್ನು ಮಾಡಿ. ಯಾವಾಗ ನಾವು ಅನುಭೂತಿ ಸ್ವರೂಪರಾಗುತ್ತೇವೆಯೋ ಆಗ ಅನುಭೂತಿಯನ್ನು ಮಾಡಿಸಬಹದು ಒಳ್ಳೆಯದು.

ರಿವೈಸ್ ಕೋರ್ಸ್ 18-01-2002.

***ಸ್ನೇಹದ ಶಕ್ತಿಯ ಮೂಲಕ ಸಮರ್ಥರಾಗಿ ಸರ್ವ ಆತ್ಮರಿಗೆ ಸುಖ, ಶಾಂತಿಯ ಬಿಂದುಗಳನ್ನು ಕೊಡಿ.***

ಮುಕ್ತಿದಾತನ ಮಕ್ಕಳಾದ ಓ ಮಾಸ್ಟರ್ ಮುಕ್ತಿದಾತರೇ! ನಮಗೆ ಮುಕ್ತಿಯನ್ನು ಕೊಡಿ ಎಂಬ ವಿಶ್ವಾತ್ಮರ ಈ ಕೂಗು ನಿಮ್ಮ ಕಿವಿಗೆ ಪ್ರತಿಧ್ವನಿಸುವುದಿಲ್ಲವೇ, ಕೇಳಿಸುತ್ತಿಲ್ಲವೇ? ಇದುವರೆಗೂ ತಮ್ಮನ್ನು ತಾವೇ ಮುಕ್ತ ಮಾಡಿಕೊಳ್ಳುವುದರಲ್ಲಿ ಬ್ಯುಸಿಯಾಗಿದ್ದೀರಾ, ವಿಶ್ವದ ಆತ್ಮರಿಗೆ ಬೇಹದ್ದಿನ ಸ್ವರೂಪದಿಂದ ಮಾಸ್ಟರ್ ಮುಕ್ತಿದಾತರಾಗುವುದರಿಂದ ಚಿಕ್ಕ ಚಿಕ್ಕ ಸಮಸ್ಯೆಗಳಿಂದ ಸ್ವತಹವಾಗಿ ಮುಕ್ತರಾಗಿಬಿಡುತ್ತಾರೆ. ಈಗ ಆತ್ಮರ ಕೂಗನ್ನು ಕೇಳಿಸಿಕೊಳ್ಳುವ ಸಮಯವಾಗಿದೆ. ತಬ್ಬಿಬ್ಬಾದ ವಿಶ್ವಾತ್ಮರಿಗೆ ಸುಖ, ಶಾಂತಿಯ ಹನಿಯನ್ನು ನೀಡಿ. ಇದೇ ಬ್ರಹ್ಮಾ ತಂದೆಯನ್ನು ಅನುಸರಿಸುವುದಾಗಿದೆ. ಎಂದು ತಿಳಿಸುತ್ತಾ ಸಮರ್ಥ ತಂದೆಯು ಸ್ಮೃತಿ ಸ್ವರೂಪ, ಸಮರ್ಥ ಸ್ವರೂಪ ಮಕ್ಕಳೊಂದಿಗೆ ಮಾತನಾಡಿದ ಮಹಾ ವಾಕ್ಯಗಳಿಂದ ಆತ್ಮಿಕ ಸ್ಥಿತಿಯಲ್ಲಿದ್ದು ಮನನ ಚಿಂತನೆ ಮಾಡಬೇಕಾಗಿರುವ ಸಮರ್ಥ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನು ಆತ್ಮ ಶಾಂತ ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1. ನಾನು ಸ್ಮೃತಿ ಸ್ವರೂಪ, ಸಮರ್ಥ ಸ್ವರೂಪ.

2. ಸ್ನೇಹವೇ ನನ್ನನ್ನು ತಂದೆಯವರನ್ನಾಗಿ ಮಾಡಿದೆ.

3. ನಾನು ಸ್ನೇಹ ಸಾಗರದಲ್ಲಿ ಮುಳುಗಿದ್ದೇನೆ.

4. ನಾನು ಪರಮಾತ್ಮನ ಸ್ನೇಹ ಎಂಬ ಛತ್ರಛಾಯೆಯಲ್ಲಿ ಮಾಯಾಜಿತ್ ಆಗಿದ್ದೇನೆ.

5. ನಾನು ನಿರಂತರ ಸ್ನೇಹಿಯಾಗಿ ತಂದೆ ಸಮಾನವಾಗಿದ್ದೇನೆ.

6. ನಾನು ತಂದೆಯೊಂದಿಗೆ ಸದಾ ಸ್ನೇಹದ ಸಾಗರದಲ್ಲಿ ಸಮಾವೇಶವಾಗಿದ್ದೇನೆ.

7. ನಾನು ತಂದೆಯ ಮೇಲೆ ಇರುವ ಪ್ರೀತಿಗೆ ಪ್ರಮಾಣವಾಗಿ ತಂದೆಯ ಸಮಾನವಾಗಿ ತೋರಿಸಿದ್ದೇನೆ.

8. ನಾನು ನನ್ನ ಸಮರ್ಥ ಸಂಕಲ್ಪದಿಂದ ಭಿಕಾರಿ ಆತ್ಮರಿಗೆ ಬಿಕಾರಿ ಸ್ಥಿತಿಯಿಂದ ಮುಕ್ತಿಯನ್ನು ಕೊಡುವ ಮಾಸ್ಟರ್ ಮುಕ್ತಿದಾತನು, ಸಮರ್ಥ ಸ್ವರೂಪ.

9. ನಾನು ಬ್ರಹ್ಮಾ ತಂದೆಯನ್ನು ಅನುಸರಿಸಿ ತಬ್ಬಿಬ್ಬಾದ ಆತ್ಮರಿಗೆ ಸುಖ, ಶಾಂತಿಯ ಬಿಂದುಗಳನ್ನು ಕೊಡುವ ಬಾಪ್ ಸಮಾನ ಸ್ವರೂಪ.

10. ನಾನು ಲಾಸ್ಟ್ ಸೋ ಫಾಸ್ಟ್ ನ ಪ್ರತ್ಯಕ್ಷ ಉದಾಹರಣೆಯಾಗಿದ್ದೇನೆ.

11. ನಾನು ಪ್ರತಿಯೊಂದು ದಿನ ಸಮರ್ಥ ದಿನೋತ್ಸವವನ್ನಾಗಿ ಆಚರಿಸಿಕೊಂಡು ಸ್ಥಿರವಾಗಿ ಇದ್ದೇನೆ.

12. ನಾನು ಮನಸ್ಸಿನಲ್ಲಿ ನಿರಾಕಾರಿ, ವಾಚಾದಲ್ಲಿ ನಿರಹಂಕಾರಿ, ಕರ್ಮಣಾದಲ್ಲಿ ನಿರ್ವಿಕಾರಿಯಾಗಿದ್ದೇನೆ.

13. ನಾನು ಕ್ಷಣದಲ್ಲಿ ಸಾಕಾರ ಸ್ವರೂಪದಲ್ಲಿ ಮತ್ತು ಕ್ಷಣದಲ್ಲಿ ನಿರಾಕರಿ ಸ್ವರೂಪದಲ್ಲಿ ಸ್ಥಿತವಾಗುವ ಅಭ್ಯಾಸವನ್ನು ದಿನವಿಡೀ ಮಾಡುತ್ತಿದ್ದೇನೆ.

14. ನಾನು ಯಾವ ಕಾರ್ಯವನ್ನು ಮಾಡುತ್ತಿದ್ದರೂ ನಾನು ನಿರಾಕಾರಿ ಆತ್ಮ, ಈ ಸಾಕಾರ ಕರ್ಮೇಂದ್ರಿಯಗಳಿಂದ ಕರ್ಮವನ್ನು ಮಾಡಿಸುತ್ತಿದ್ದೇನೆ. ತಂದೆ ಮಾಡಿಸುವವರು ಮತ್ತು ಆತ್ಮನಾದ ನಾನು ಮಾಡಿಸುವವನು ಎಂಬ ಸ್ಮೃತಿಯಿಂದ ಕರ್ಮ ಬಂಧನಗಳಿಗೆ ಅತೀತವಾಗಿದ್ದೇನೆ.

15. ನಾನು ತಂದೆಯನ್ನು ಗ್ರಹಿಸಿ ತಂದೆಯ ಆಸ್ತಿ (ವಾರಸತ್ವಕ್ಕೆ) ಅಧಿಕಾರಿಯಾಗಿದ್ದೇನೆ. ಈ ನನ್ನ ಭಾಗ್ಯವನ್ನು ಸದಾ ಸ್ಮೃತಿಯಲ್ಲಿಟ್ಟುಕೊಂಡಿದ್ದೇನೆ.

16. ನನಗೆ ಬೇಹದ್ ಸೇವೆಯಲ್ಲಿ ಸೈನ್ಸ್ ಸಾಧನೆಗಳು ಸಹ ಸಹಾಯವನ್ನು ಕೊಡುತ್ತಾ ಸಹಜವಾಗಿ ಸೇವೆಯನ್ನು ಮಾಡಿಸಿವೆ.

17. ನಾನು ಸಮರ್ಥವಾಗಿರುವ ಪಾಂಡವನು ಮತ್ತು ತಂದೆಯ ಸಮಾನವಾಗಿರುವ ಶಕ್ತಿ ಸೇನೆಯಾಗಿದ್ದೇನೆ.

18. ನಾನು ನನ್ನ ಚಹರೆಯಿಂದ ಎಲ್ಲರಿಗೂ ಭವಿಷ್ಯದ ಸಾಕ್ಷಾತ್ಕಾರವನ್ನು ಮಾಡಿಸುವ ಸಾಕ್ಷಾತ್ಕಾರ ಮೂರ್ತಿಯಾಗಿದ್ದೇನೆ.

19. ನನಗೆ ತಂದೆಯೊಂದಿಗೆ ಅಖಂಡ ಪ್ರೀತಿ ಇದೆ.

20. ಸೇವೆ ಮಾಡುವುದರಿಂದ ನನಗೆ ಪುಣ್ಯ, ಆಶೀರ್ವಾದಗಳು ಎಕ್ಸ್ಟ್ರಾ ಲಿಫ್ಟ್ ನಂತೆ ಕೆಲಸ ಮಾಡಿವೆ.

21. ನಾನು ಒಂದು ಕ್ಷಣದಲ್ಲಿ ನಿರಾಕಾರಿ ಸ್ಥಿತಿಯಲ್ಲಿ ಸ್ಥಿತವಾಗುತ್ತಿದ್ದೇನೆ.